ಶ್ರೀಮತಿ ಸುಮಾ ವಸಂತ್.—ಅಧ್ಯಕ್ಷರೇ, ಕೊಡಗಿನಲ್ಲಿರುವ ತೋಟಗಾರಿಕೆ ಬೆಳೆಗಾರರ ಸಹಕಾರಿ ಸಂಘಗಳ ಸಂಖ್ಯೆ ಎಷ್ಟು ಎಂದು ಕೇಳಿದ್ದಕ್ಕೆ 'ಒಂದು' ಎಂದು ಹೇಳಿದ್ದಾರೆ. ಇದು ಲಾಭದಾಯಕವಾಗಿದೆಯೇ ಎಂದು ಕೇಳಿದ್ದಕ್ಕೆ 'ಇಲ್ಲ' ಎಂದು ಹೇಳಿದ್ದಾರೆ. ಇದು ಇಷ್ಟು ನಷ್ಟದಲ್ಲಿ ನಡೆಯಲಿಕ್ಕೆ ಕಾರಣ ಏನು? ನಷ್ಟವನ್ನು ತಡೆಯುವುದಕ್ಕೆ ಸರ್ಕಾರದವರು ಏನಾದರೂ ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ?

ಶ್ರೀ ಲಕ್ಷ್ಮೀನರಸಿಂಹಯ್ಯ —ಈ ಸಹಕಾರ ಸಂಘ ನಷ್ಟದಲ್ಲಿ ನಡೆಯುವುದಕ್ಕೆ ಕಾರಣ ಅಲ್ಲಿ ಹೆಚ್ಚಿನ ವ್ಯವಹಾರ, ವ್ಯಾಪಾರ ಮಾಡದೇ ಇರತಕ್ಕಂಥಾದ್ದು. ಅಲ್ಲಿ ಆಗಿರುವ ಒಟ್ಟು ವ್ಯವಹಾರ ೧೯೮೪–೮೫ರಲ್ಲಿ ಸುಮಾರು ೨,೫೨೦ ರೂಪಾಯಿಗಳು ಮಾತ್ರ, ೧೯೮೫–೮೬ರಲ್ಲಿ ೧ ಲಕ್ಷ ೧೧ ಸಾವಿರ ೬೩೯ ರೂಪಾಯಿ ಮತ್ತು ೧೯೮೬–೮೭ರಲ್ಲಿ ೨ ಲಕ್ಷ ೨೮ ಸಾವಿರದ ೪೮.೪೦ ರೂಪಾಯಿ ಇಷ್ಟು ಮಾತ್ರ ವಹಿವಾಟು ನಡೆದಿದೆ. ಇಷ್ಟು ವಹಿವಾಟು ಮಾಡಿದ್ದರಿಂದ ಹೆಚ್ಚು ಲಾಭ ಗಳಿಸುವುದಕ್ಕೆ ಆಗಿಲ್ಲ. ಅಲ್ಲಿ ಬೇಡಿಕೆ ಕಡಿಮೆ ಇದೆ. ತರಕಾರಿ, ಸ್ವಲ್ಪ ಹಣ್ಣುಹಂಪಲು ಮತ್ತು ತರಕಾರಿ ಬೀಜಗಳನ್ನು ಮಾತ್ರ ತಂದರು. ಮಾರುತ್ತಿರುವುದರಿಂದ ಹೆಚ್ಚಿನ ಟರ್ನ್‌ಓವರ್ ಆಗುವುದಿಲ್ಲ ಮತ್ತು ಅದು ಸಾಧ್ಯವಿಲ್ಲ. ಅದಕ್ಕೋಸ್ಕರ ನಷ್ಟ ಅನುಭವಿಸುತ್ತಿದೆ. ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಅದರ ಜೊತೆಗೆ ಈಗ ಕೊಡಗು ಜಿಲ್ಲೆ ತೋಟಗಾರಿಕೆ ಬೆಳೆಗಾರರ ಉತ್ಪನ್ನ ಮತ್ತು ಸಂಸ್ಕರಣ ಸಹಕಾರಿ ಸಂಘ ಏಯುಮಿತ, ಮಂಡಿಕೇರಿ ಈ ಒಂದು ಸಂಘ ಕೂಡ ಸ್ಥಾಪನೆಯಾಗಿ ಬಹಳ ಹೀನ ಸ್ಥಿತಿಯಲ್ಲಿತ್ತು. ಇದನ್ನು ೧೯೮೨–೮೩ರಲ್ಲಿ ಪುನರುಜ್ಜೀವನಗೊಳಿಸಿದ್ದು ಅದೂ ಕೂಡ ವ್ಯವಹಾರ ಪ್ರಾರಂಭಿಸಿದೆ. ಅದು ೧೯೮೩–೮೪ರಲ್ಲಿ ಸುಮಾರು ೧೩,೭೫೧ ರೂಪಾಯಿಗಳ ನಷ್ಟದಲ್ಲಿತ್ತು. ೧೯೮೪–೮೫ರಲ್ಲಿ ೧೫,೩೧೭ ರೂಪಾಯಿ ಲಾಭ ಗಳಿಸಿದೆ. ೧೯೮೫–೮೬ರಲ್ಲಿ ಕೇವಲ ೧ ಸಾವಿರ ರೂಪಾಯಿಗಳ ನಷ್ಟ ಅನುಭವಿಸಿದೆ. ೧೯೮೬–೮೭ರಲ್ಲಿ ೨೦,೯೩೬ ರೂಪಾಯಿಗಳ ಲಾಭ ಗಳಿಸಿದೆ. ಈ ದೃಷ್ಟಿಯಿಂದ ಈ ಎರಡೂ ಕೂಡ ಒಂದೇ ವ್ಯವಹಾರ ಮಾಡುವುದರಿಂದ, ಈ ಸೊಸೈಟಿ ಸ್ವಲ್ಪ ನಷ್ಟ ಅನುಭವಿಸುತ್ತಿದೆ. ಪ್ರೊಡ್ಯೂಸರ್ಸ್ ಕೋ ಆಪರೇಟಿವ್ ಸೊಸೈಟಿಯನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಿದೆ. ಆದರೆ ಈ ಸಹಕಾರ ಸಂಘ ಏನಿದೆ ಇದನ್ನು ಅಭಿವೃದ್ಧಿ ಮಾಡುವುದು ಸ್ವಲ್ಪ ಕಷ್ಟವಿದೆ.

ಶ್ರೀಮತಿ ಸುಮಾ ವಸಂತ್.—ಇದನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಸರ್ಕಾರದವರು ಏನಾ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳುತ್ತೇನೆ. ಮತ್ತೆ ಎಷ್ಟು ಗಿರಿಜನರಿಗೆ ತರಬೇತಿ ಕೊಡಲಾಗಿದೆ ಎಂಬ ಬಗ್ಗೆ ಅಂಕಿ ಅಂಶಗಳನ್ನು ತಿಳಿಸಬೇಕು. ನಂತರ ಗಿರಿಜನ ಯುವಕರಿಗೆ ತೋಟಗಾರಿಕೆ ತರಬೇತಿ ಕೊಟ್ಟನಂತರ, ಅವರು ಏನು ಮಾಡುತ್ತಾರೆ ಎಂಬುದನ್ನೂ ತಿಳಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.— ಅನುಬಂಧದಲ್ಲಿ ಪೂರ್ಣವಾಗಿ ತಾಲ್ಲೂಕುವಾರು ವಿವರಗಳನ್ನು ಕೊಟ್ಟಿದ್ದೇನೆ. ಮಂಡಕೇರಿ, ಸೋಮವಾರಪೇಟೆ, ವಿರಾಜಪೇಟೆ. ಈ ಮೂರು ತಾಲ್ಲೂಕುಗಳ ಸಂಪೂರ್ಣವಾದ ವಿವರವನ್ನು ಕೊಡಲಾಗಿದೆ. ತರಬೇತಿ ಪಡೆದ ಹುಡುಗರು, ವಿಶೇಷ ಘಟಕ ಯೋಜನೆಯಲ್ಲಿ ಸ್ವಂತ ಜಮೀನು ಇದ್ದರೆ, ಅರ್ಧ ಎಕರೆ ತೋಟ, ಒಂದು ಎಕರೆ ಹಣ್ಣಿನ ಗಿಡಗಳನ್ನು ಬೆಳೆಸುವುದಕ್ಕೆ ಸಹಾಯ ಮಾಡಬಹುದು. ಇದಕ್ಕಿಂತ ಹೆಚ್ಚಿಗೆ ಜಮೀನು ಇದ್ದರೆ, ಸ್ವಂತವಾಗಿ ಬೆಳೆ ಬೆಳೆದು ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬಹುದು, ಈ ೨–೩ ಸ್ಕೀಮ್‌ಗಳಲ್ಲಿ ಯಾವುದಾದರೊಂದನ್ನು ಉಪಯೋಗಿಸಿಕೊಂಡು, ಅಭಿವೃದ್ಧಿ ಹೊಂದಬಹುದು.

ಶ್ರೀ ಜೀವರಾಜ ಆಳ್ವ.—ಮಾನ್ಯ ಸದಸ್ಯರು ೮೨೭ (೨೧೦೭) ಪ್ರಶ್ನೆಯನ್ನು ಅನಂತರ ಕೇಳಬಹುದು.

ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ತೆರೆಯುವುದು

೮೫೮೪. ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕದಲ್ಲಿ ಇಂಗ್ಲೀಷ್ ಶಾಲೆಗಳನ್ನು ತೆರೆಯಲು ಸರ್ಕಾರವು ಅನುಮತಿ ಕೊಡುತ್ತಿದೆಯೇ

ಆ) ಹಾಗಿದ್ದಲ್ಲಿ ಆ ಶಾಲೆಗಳಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯ ಮಾಡಲು ಷರತ್ತು ಹಾಕಲಾಗಿದೆಯೇ

ಇ) ೧೯೮೮-೮೯ರ ಸಾಲಿನಲ್ಲಿ ಎಷ್ಟು ಇಂಗ್ಲೀಷ್ ಶಾಲೆಗಳನ್ನು ತೆರೆಯಲು ಕೋರಿ ಅರ್ಜಿಗಳು ಬಂದಿವೆ ? (ವಿವರ ನೀಡುವುದು)

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ೧. ಪ್ರಾಥಮಿಕ ಶಾಲೆ ... ೨೫

೨. ಪ್ರೌಢ ಶಾಲೆ ... ೧೩೪

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ಮೊದಲನೇ ಪ್ರಶ್ನೆಗೆ ''ಇಲ್ಲ'' ಎಂದು ಉತ್ತರ ಕೊಟ್ಟಿದ್ದಾರೆ. ಇಂಗ್ಲೀಷ್ ಶಾಲೆಗಳಿಗಾಗಿ ಕಳೆದ ಸಾರಿ ಅನೇಕ ಅಪ್ಲಿಕೇಷನ್‌ಗಳು ಬಂದಿದ್ದವು. ಕ್ರಿಶ್ಚಿಯನ್ ಸಂಸ್ಥೆಗಳು, ಮುಸ್ಲಿಂ ಸಂಸ್ಥೆಗಳವರು ಕನ್ನಡವನ್ನು ಕಡ್ಡಾಯವಾಗಿ ಕಲಿಯಬೇಕೆಂದು ಇದೆಯೇ, ಅಥವಾ ಬೇರೆ ಸಂಸ್ಥೆಗಳವರಿಗೂ, ಇವರಿಗೂ ಏನಾದರೂ ವ್ಯತ್ಯಾಸ ಇದೆಯೇ ? ಕನ್ನಡ ಕಡ್ಡಾಯ ಮಾಡಬೇಕೆಂಬ ಬಗ್ಗೆ ನಮ್ಮದೇನೂ ಆಕ್ಷೇಪಣೆ ಇಲ್ಲ. ಪ್ರತಿಯೊಬ್ಬರೂ ಕನ್ನಡ ಕಲಿಯಲೇಬೇಕು. ಇಂಗ್ಲೀಷ್ ಶಾಲೆಗಳಲ್ಲೂ, ಮತ್ತು ಮೈನಾರಿಟೀಸ್ ಸಂಸ್ಥೆಗಳಲ್ಲೂ ಕನ್ನಡವನ್ನು ಕಲಿಯಲೇಬೇಕು. ಇನ್ನು ೧೯೮೮-೮೯ನೇ ಸಾಲಿನಲ್ಲಿ ಇಂಗ್ಲೀಷ್ ಶಾಲೆಗಳನ್ನು ತೆರೆಯಲು ಬಂದಿರುವ ಅರ್ಜಿಗಳ ಪೈಕಿ ಪ್ರಾಥಮಿಕ ಶಾಲೆಗಳಿಗೆ ೨೫ ಮತ್ತು ಪ್ರೌಢ ಶಾಲೆಗಳಿಗೆ ೧೩೪ ಎಂದು ಹೇಳಿದ್ದೀರಿ. ಇದರ ಬಗ್ಗೆ ವಿವರ ಕೊಡಿ ಎಂದು ಕೇಳಿದ್ದೆ, ಯಾರು ಯಾರು ಅಪ್ಲಿಕೇಷನ್ ಹಾಕಿದ್ದಾರೆ, ದಯಮಾಡಿ ವಿವರವನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಸೋಮಶೇಖರ್.—ಇಂಗ್ಲೀಷ್ ಶಾಲೆ ತೆರೆಯಲು ಬಂದಿರತಕ್ಕ ಅರ್ಜಿಗಳ ವಿವರವನ್ನು ತಪ್ಪಿಗೆ ಒದಗಿಸಿಕೊಡುತ್ತೇನೆ. ಯಾರು ಯಾರು ಅರ್ಜಿ ಹಾಕಿದ್ದಾರೆ, ಎಂಬ ವಿವರಗಳನ್ನು ತಮಗೆ ಒದಗಿಸಿಕೊಡುತ್ತೇನೆ. ಮೈನಾರಿಟೀಸ್ ಸಂಸ್ಥೆಗಳವರು ಏನಾದರೂ ಕೇಳಿದಾಗ ಆದ್ಯತೆಯ ಮೇರೆಗೆ ಕೆಲವು ಷರತ್ತುಗಳು ಇವೆ, ಅಂತಹ ಷರತ್ತುಗಳನ್ನು ಈಡೇರಿಸಿದ್ದರೆ, ಅಂತಹ ಪ್ರಕರಣಗಳನ್ನು ಪರಿಶೀಲನೆ ಮಾಡಿ, ಪ್ರತ್ಯೇಕವಾಗಿ ಸಚಿವ ಸಂಪುಟದ ಮುಂದೆ ಇಟ್ಟು ಪರಿಗಣಿಸುವುದಕ್ಕೆ ಅವಕಾಶ ಇದೆ. ಒಟ್ಟಾರೆ, ಇರತಕ್ಕ ಷರತ್ತುಗಳನ್ನು ಪೂರೈಸಬೇಕು.

ಶ್ರೀ ಡಿ. ಟಿ. ಜಯಕುಮಾರ್.—ನಂಜನಗೂಡಿನಲ್ಲಿ ಒಂದು ಕಾನ್ವೆಂಟ್ ಶಾಲೆ ಇದೆ. ಮುಸ್ಲಿಂ ಜನಸಂಖ್ಯೆ ಹೆಚ್ಚಾಗಿರುವ ಈ ಸಂಸ್ಥೆಯವರೂ ಶಾಲೆ ತೆರೆಯುವುದಕ್ಕೆ ರಾಜ್ಯಾಂಗ ಬದ್ಧವಾದ ಹಕ್ಕು ಇದೆ. ಇವರು ಇಂಗ್ಲೀಷ್ ಶಾಲೆ ತೆರೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿರುವ ಅರ್ಜಿ ತಮಗೆ ಬಂದಿದೆಯೇ, ಬಂದಿದ್ದರೆ ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ಒಂದುವೇಳೆ ಇದುವರೆಗೂ ತೆಗೆದುಕೊಳ್ಳದೇ ಹೋದರೆ, ಅದಕ್ಕೆ ಏನು ಕಾರಣ ? ನಿಮ್ಮ ಷರತ್ತುಗಳನ್ನು ಪೂರ್ಣ ಮಾಡಿಲ್ಲವೇ ? ಷರತ್ತುಗಳನ್ನು ಪೂರ್ಣ ಮಾಡಿದಕೂಡಲೇ, ಅವರಿಗೆ ಪರ್ಮಿಷನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ — ಮಾನ್ಯ ಸದಸ್ಯರು ಹೇಳಿದ ಪ್ರಕರಣದ ಬಗ್ಗೆ ತೀರ್ಮಾನ ತೆಗೆದುಕೊಂಡಿದೆಯೇ, ಅಥವಾ ಅವರ ಅರ್ಜಿಯನ್ನು ತಿರಸ್ಕಾರ ಮಾಡಲಾಗಿದೆಯೇ ಎನ್ನುವ ಬಗ್ಗೆ ಮಾಹಿತಿಯನ್ನು ಒದಗಿಸಿಕೊಡುತ್ತೇನೆ.